50 ಸುವರ್ಣ ಸಂಭ್ರಮ

# ನಿಮ್ಮೊಡನೆ

## ಆರ್‌ಟಿಐಗೆ ಮತ್ತಷ್ಟು ಬಲ

ಮಾಹಿತಿ ಹಕ್ಕು ಕಾಯ್ದೆಯಲ್ಲಿ ಇನ್ನೂ ಕೆಲವು 'ಸಡಿಲ ಹೆಣಿಗೆ'ಗಳಿವೆ. ಆರ್‌ಟಿಐ ಮೂಲಕ ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಅಂಚೆಯಲ್ಲಿ ಮಾತ್ರ ಕಳುಹಿಸುವುದು ಇಂತಹ ಒಂದು ದುರ್ಬಲ ಅಂಶ. ಈಗ ಕೇಂದ್ರ ಸರ್ಕಾರ ಅಲ್ಲಿಯೂ ಪ್ರಕ್ರಿಯೆಯನ್ನು ಸದೃಢಗೊಳಿಸ ಹೊರಟಿದೆ. 'ಡಿಜಿಟಲ್ ಇಂಡಿಯಾ ಯೋಜನೆ'ಯಡಿ ಇನ್ನು ಮುಂದೆ ಆರ್‌ಟಿಐ ಅರ್ಜಿಯ ಪ್ರಶ್ನೆಗಳಿಗೆ ಸಚಿವಾಲಯಗಳ ಮತ್ತು ಸರ್ಕಾರಿ ಅಧಿಕಾರಿಗಳ ವೆಬ್‌ಸೈಟ್ ಗಳಲ್ಲೂ ಉತ್ತರ ದೊರಕುವಂತೆ ಮಾಡಲು ನಿರ್ಧರಿಸಿದೆ.

ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಪ್ರಜಾಪ್ರಭುತ್ವ ವ್ಯವಸ್ಥೆಯ ಪರಿಣಾಮಕಾರಿ ಅಸ್ತ್ರ ಎನ್ನುವುದು ಕಳೆದ ಕೆಲವು ವರ್ಷಗಳಿಂದ ಸಾಬೀತಾದ ಸತ್ಯ. ಸಾವಿರಾರು ಮಾಹಿತಿ ಹಕ್ಕು ಕಾರ್ಯಕರ್ತರು ಅತ್ಯಂತ ಯಶಸ್ವಿಯಾಗಿ ಈ ಕಾಯ್ದೆಯನ್ನು ಬಳಸಿ, ರಾಜ್ಯದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟವನ್ನು ತಡೆದಿದ್ದಾರೆ. ಹಲವು ಭ್ರಷ್ಟರು, ಅಧಿಕಾರಸ್ಥರು ಮಾಹಿತಿ ಹಕ್ಕು ಕಾಯ್ದೆಯ ಹೊಡೆತಕ್ಕೆ ಸಿಕ್ಕು ಅಧಿಕಾರ ಕಳೆದುಕೊಂಡಿದ್ದಾರೆ. ಭಾರತದಲ್ಲಿ ಈ ಕಾಯ್ದೆ ಎಷ್ಟೊಂದು ಯಶಸ್ವಿಯಾಗಿದೆಯೆಂದರೆ, ಕಳೆದ ವರ್ಷ ನಡೆದ ಸಮೀಕ್ಷೆಯೊಂದರಲ್ಲಿ, ಮಾಹಿತಿ ಹಕ್ಕು ಕಾಯ್ದೆಯನ್ನು ಯಶಸ್ವಿಯಾಗಿ ಜಾರಿಗೆ ತಂದ 95 ರಾಷ್ಟ್ರಗಳ ಪೈಕಿ ಭಾರತಕ್ಕೆ ಎರಡನೇ ಸ್ಥಾನ ಲಭ್ಯವಾಗಿದೆ. ಸಾರ್ವಜನಿಕರು ಈ ಕಾಯ್ದೆಯನ್ನು ಹೆಚ್ಚು ಹೆಚ್ಚು ಬಳಸತೊಡಗಿದ ನಂತರ, ರಾಜ್ಯ ಸರ್ಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳೂ ಸಾಕಷ್ಟು ಎಚ್ಚೆತ್ತುಕೊಂಡು, ಹೆಚ್ಚು ಜನಪರ ಮತ್ತು ಜನಸ್ನೇಹಿ ಆಗತೊಡಗಿವೆ. ಹಾಗಿದ್ದೂ ಕೆಲವೆಡೆ ಈ ಕಾಯ್ದೆಯನ್ನು ದುರ್ಬಲಗೊಳಿಸುವ ಯತ್ನಗಳು ಅಧಿಕಾರಸ್ಥರಿಂದ ನಡೆದದ್ದು ಸುಳ್ಳಲ್ಲ. ಮಾಹಿತಿ ಹಕ್ಕು ಕಾರ್ಯಕರ್ತರ ಮೇಲೆ ಭ್ರಷ್ಟರು ದೈಹಿಕ ಹಿಂಸೆ ನಡೆಸಿ ಅವರನ್ನು ಹೆದರಿಸಿದ ಪ್ರಕರಣಗಳೂ ನಡೆದಿವೆ. ಕೆಲವು ಕಾರ್ಯಕರ್ತರು, ಪ್ರಾಮಾಣಿಕ ಅಧಿಕಾರಿಗಳು ಪ್ರಾಣ ತೆತ್ತದ್ದೂ ಆಗಿದೆ. ಆದರೆ ತಮಗೆ ಸಿಕ್ಕಿದ ಹೊಸ ಅಸ್ತ್ರದ ಲಾಭವನ್ನು ಅರಿತ ನಾಗರಿಕರು ಈ ಎಲ್ಲ ಪ್ರಕರಣಗಳಲ್ಲೂ ಭ್ರಷ್ಟರ ವಿರುದ್ಧ ಮತ್ತು ಪ್ರಾಮಾಣಿಕರ ಪರವಾಗಿ ನಿಂತಿದ್ದಾರೆ. ಈ ಸಾರ್ವಜನಿಕ ಎಚ್ಚರದ ಪರಿಣಾಮವಾಗಿಯೇ, ಮಹಾರಾಷ್ಟ್ರದಲ್ಲಿ ಭ್ರಷ್ಟಾಚಾರ ನಿಗ್ರಹ ದಳವನ್ನು ಆರ್‌ಟಿಐ ನಿಂದ ಹೊರಗಿಟ್ಟಿದ್ದ ಸರ್ಕಾರದ ಕ್ರಮವನ್ನು, ಇತ್ತೀಚೆಗೆ ರಾಜ್ಯಪಾಲರೇ ರದ್ದುಗೊಳಿಸಿದ್ದಾರೆ. 'ಮಾಹಿತಿ ಕೇಳುವವರು ಅದಕ್ಕೆ ಕಾರಣವನ್ನೂ ವಿವರಿಸಬೇಕು' ಎಂದು ಹಿಂದೆ ತೀರ್ಪು ನೀಡಿದ್ದ ಮದ್ರಾಸ್ ಹೈಕೋರ್ಟ್, ಕೆಲವೇ ದಿನಗಳ ಬಳಿಕ ಆ ಆದೇಶವನ್ನು ತಾನೇ ತಿದ್ದುಪಡಿ ಮಾಡಿಕೊಂಡಿದೆ.

ಮಾಹಿತಿ ಹಕ್ಕು ಕಾಯ್ದೆಯಲ್ಲಿ ಇನ್ನೂ ಕೆಲವು 'ಸಡಿಲ ಹೆಣಿಗೆ'ಗಳಿವೆ. ಆರ್‌ಟಿಐ ಮೂಲಕ ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಅಂಚೆಯಲ್ಲಿ ಮಾತ್ರ ಕಳುಹಿಸುವುದು ಇಂತಹ ಒಂದು ದುರ್ಬಲ ಅಂಶ. ಈಗ ಕೇಂದ್ರ ಸರ್ಕಾರ ಅಲ್ಲಿಯೂ ಪ್ರಕ್ರಿಯೆಯನ್ನು ಸದೃಢಗೊಳಿಸ ಹೊರಟಿದೆ. 'ಡಿಜಿಟಲ್ ಇಂಡಿಯಾ ಯೋಜನೆ'ಯಡಿ ಇನ್ನು ಮುಂದೆ ಆರ್‌ಟಿಐ ಅರ್ಜಿಯ ಪ್ರಶ್ನೆಗಳಿಗೆ ಸಚಿವಾಲಯಗಳ ಮತ್ತು ಸರ್ಕಾರಿ ಅಧಿಕಾರಿಗಳ ವೆಬ್‌ಸೈಟ್ ಗಳಲ್ಲೂ ಉತ್ತರ ದೊರಕುವಂತೆ ಮಾಡಲು ನಿರ್ಧರಿಸಿದೆ. ಪ್ರಶ್ನೆಗಳಿಗೆ ಸಾರ್ವಜನಿಕ ಮಹತ್ವ ಇಲ್ಲದಿದ್ದರೆ ಅದರ ಉತ್ತರಗಳನ್ನು ವೆಬ್‌ಸೈಟ್‌ಗಳಲ್ಲಿ ಹಾಕುವುದು ಬೇಡ ಎಂದೂ ವಿನಾಯ್ತಿ ನೀಡಿದೆ. ಈ ಮೂಲಕ ಆರ್‌ಟಿಐ ಕಾಯ್ದೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಲಿದ್ದು, ಪಾರದರ್ಶಕವೂ ಆಗಲಿದೆ. ಸಾರ್ವಜನಿಕರು ಒಂದೇ ಪ್ರಶ್ನೆಯನ್ನು ಮತ್ತೆ ಮತ್ತೆ ಕೇಳುವುದು ತಪ್ಪಲಿದ್ದು, ಅಧಿಕಾರಿಗಳ ಮತ್ತು ಜನರ ಅಧಿಕ ಶ್ರಮ ಮತ್ತು ಹಣವೂ  ಉಳಿಯಲಿದೆ.

ಇಷ್ಟೆಲ್ಲ ಉತ್ತಮ ಬೆಳವಣಿಗೆಗಳ ಮಧ್ಯೆಯೂ ಆರ್‌ಟಿಐ ಕಾಯ್ದೆಯಲ್ಲಿ ಪ್ರಶ್ನೆದಾರರಿಗೆ ಆತಂಕ ಹುಟ್ಟಿಸುವ ಒಂದು ಅಂಶ ಉಳಿದುಕೊಂಡಿದೆ. ಹೊಸ ಪದ್ಧತಿಯಲ್ಲಿ ಪ್ರಶ್ನೆ ಮತ್ತು ಉತ್ತರಗಳನ್ನು ವೆಬ್‌ಸೈಟ್‌ನಲ್ಲಿ ಹಾಕುವಾಗ, ಅಲ್ಲಿ ಅರ್ಜಿದಾರರ ಹೆಸರನ್ನು ಕೂಡಾ ಪ್ರಕಟಿಸಲಾಗುತ್ತದೆ. ಭ್ರಷ್ಟ– ದುಷ್ಟ ಶಕ್ತಿಗಳು ಅರ್ಜಿದಾರರನ್ನು ಬೆದರಿಸಲು ಇದರಿಂದ ಸುಲಭವಾಗಬಹುದು. ಸರ್ಕಾರ ಅಗತ್ಯಬಿದ್ದರೆ ಅರ್ಜಿದಾರರ ಹೆಸರನ್ನು ಗೋಪ್ಯವಾಗಿಡುವ ನಿಟ್ಟಿನಲ್ಲಿ ಕಾಯ್ದೆಗೆ ತಿದ್ದುಪಡಿ ಮಾಡಬೇಕಾದ ಅಗತ್ಯವಿದೆ.

ಮಹಾನಗರಪಾಲಿಕೆ ಮತ್ತಿತರ ಸ್ಥಳೀಯ ಸಂಸ್ಥೆಗಳಲ್ಲಿ ಮಾಹಿತಿ ಹಕ್ಕು ಕಾಯ್ದೆಯ ಒತ್ತಡ ಇದ್ದರೂ ಸೂಕ್ತ ಮಾಹಿತಿಗಳನ್ನು ನೀಡದೆ ಅಥವಾ ಅಪೂರ್ಣ ಮಾಹಿತಿಯನ್ನು ನೀಡಿ ಅಧಿಕಾರಿಗಳು ಮೈಗಳ್ಳತನ ತೋರುವ  ಪ್ರಕರಣಗಳೂ ಆಗಿಂದಾಗ್ಗೆ ವರದಿಯಾಗುತ್ತಿವೆ. ಕಲಬುರಗಿ ಮಹಾನಗರಪಾಲಿಕೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಹೀಗೆ ಮಾಹಿತಿ ನೀಡಲು ಹಿಂಜರಿದ ಉನ್ನತ ಅಧಿಕಾರಿಗಳಿಗೆ 40 ಬಾರಿ, ಒಟ್ಟು 2.3 ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ. ಅದರಲ್ಲೂ ಒಬ್ಬ ಅಧಿಕಾರಿ ಐದು ಸಲ ದಂಡ ಪಾವತಿ ಮಾಡಿದ್ದಾರೆ! ಇಂತಹ ದಪ್ಪ ಚರ್ಮದ ಅಧಿಕಾರಿಗಳಿಗೆ ದಂಡ ವಿಧಿಸುವುದಲ್ಲದೆ, ಪದವಿಯಿಂದ ಹಿಂಬಡ್ತಿ ಮಾಡುವ ಬಗ್ಗೆಯೂ ಸರ್ಕಾರ ಆಲೋಚಿಸುವುದು ಒಳ್ಳೆಯದು. ಮಾಹಿತಿ ನಿರಾಕರಿಸಿದರೆ ನ್ಯಾಯ ನಿರಾಕರಿಸಿದಂತೆಯೇ ಎನ್ನುವುದನ್ನು ಮರೆಯಬಾರದು.

■ **ಬಿ.ಎಂ.ಹನೀಫ್**




ಈಶ್ವರ್